ಶ್ರೀ ಸಿ. ಟಿ. ಹನುಮಂತಯ್ಯ.—ಆ ಜಮೀನಿಗೆ ಸಾಗುವಳಿ ಚೀಟಿ ಪಡೆದು ಎಷ್ಟೋ ದಿವಸಗಳಿಂದ ಸಾಗುವಳಿ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ನುಪರ್ದು ಕೊಟ್ಟಿಲ್ಲವೆಂದು ಹೇಳಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ ವರ್ಷದಿಂದ ಬೆಳೆ ತೆಗೆದು ಕೊಂಡಿರುವುದು ಗೊತ್ತೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಗೊತ್ತಿಲ್ಲ, ವಿಚಾರ ಮಾಡಬೇಕು.

Melegal Valley Plantation of Jarakki Bande Kaval

(Survey No. 1)

Q.—756. Sri U. M. MADAPPA (Chamarajanagar).—

Will the Government bepleas ed to state :—

(*a*) whether lands in Survey No. 1 Melegal Valley Plantation of Jarakki Bande Kaval, Yelahanka hobli, Bangalore North taluk, were granted to any Anatha Shishu Sevashram in Bangalore three years ago ;

(*b*) if so, the number of acres ?

A.—Sri H. M CHANNABASAPPA (Minister for Revenue and Agriculture).—

(*a*) Yes.

(*b*) 30 acres.

ಶ್ರೀ ಯು. ಎಂ. ಮಾದಪ್ಪ.—ಸಾಗುವಳಿ ಚೀಟಿ ಕೊಟ್ಟಿದೆಯೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊಟ್ಟಿರುವ ಹಾಗೆ ಕಾಣಲಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಈಗ ಈ ಜಮೀನು ಯಾರ ವಶದಲ್ಲಿದೆ ?

Sri H. M. CHANNABASAPPA.—In possession of unauthorised persons.

ಶ್ರೀ ಯು. ಎಂ. ಮಾದಪ್ಪ.—ಅಲ್ಲಿ ಅಕ್ರಮ ಪ್ರವೇಶ ನಡೆದಿರುವುದನ್ನು ವಿಚಾರಿಸಿ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಾಗಿದ್ದರೆ ತಕ್ಷಣ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಅದಕ್ಕೆ ತಕರಾರು ತಂಟೆ ಹಾಕಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ವಿಚಾರ ತಿಳಿದುಬಂದಿದೆ, ನೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಈ 30 ಎಕರೆ ಕೊಟ್ಟಿದ್ದು ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—20-3-1952ರಲ್ಲಿ.

ಶ್ರೀ ಎಸ್. ಗೋಪಾಲಗೌಡ.—ಸಾಗುವಳಿ ಚೀಟಿ ಕೊಡಬೇಕೆಂದು ಸರ್ಕಾರಕ್ಕೆ ಅರ್ಜಿ ಅವರಿಂದ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಈಗ ನನ್ನ ಮುಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಭೂಮಿ ಕೊಡುವಾಗ ಸರ್ಕಾರದವರು ಇದು ಯಾರ ವಶದಲ್ಲಿದೆ, ಕೊಡುವುದು ನೂಕ್ತವೆ, ಅಲ್ಲವೆ ಎಂಬ ವಿಷಯಗಳನ್ನೆಲ್ಲಾ ಪರಿಶೀಲಿಸಿ ಅನಂತರ ಕೊಟ್ಟರೋ ಅಥವಾ ಪರಿಶೀಲನೆದೆ ಕೊಟ್ಟರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದ ವಶದಲ್ಲಿದೆಯೆಂಬುದನ್ನು ನಿರ್ಧಾರ ಮಾಡಿಕೊಂಡೇ ಕೊಟ್ಟಿರುವುದು.

ಶ್ರೀ ಎಸ್. ಗೋಪಾಲಗೌಡ.—ಈ 30 ಎಕರೆ ಜಮೀನು ಯಾರಿಗಾದರೂ ಬೇರೆಯವರಿಗೆ ಕೊಡಲ್ಪಟ್ಟಿತ್ತೆ ಅಥವಾ ಅರ್ಜಿ-ಆಥರ್ೈಸ್ಡಾಗಿ ಬೇರೆ ಯಾರಾದರೂ ಉಳುಮೆ ಇತ್ಯಾದಿ ಅಲ್ಲಿ ಮಾಡುತ್ತಿದ್ದರೆ ಎಂಬುದನ್ನು ವಿಚಾರ ಮಾಡಿಕೊಟ್ಟಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೆಲ್ಲಾ ವಿಚಾರಮಾಡೇ 352 ಎಕರೆಗಳನ್ನು 20-3-1952ರಲ್ಲಿ ಸರ್ಕಾರಿ ಆಜ್ಞೆ ಹೊರಡಿಸಿ10-12 ನುಂದಿಗೆ ಮಂಜೂರು ಮಾಡಲಾಗಿತ್ತು. ಕೆಲವರು ವಂದಾಗಿ ಹೋಗಿ ಸ್ವಾಧೀನ ಪಡಿಸಿಕೊಂಡರು. ಹಿಂದಾಗಿ ಹೋದವರಿಗೆ ತೊಂದರೆಯಾಗಿರಬಹುದು.

ಶ್ರೀ ಎಸ್. ಗೋಪಾಲಗೌಡ.—ಈ 30 ಎಕರೆ ಯಾವುದು ಎಂಬುದನ್ನು ತಿಳಿಸಬೇಡವೆ ? ಯಾರು ಎಲ್ಲಿ ಬೇಕಾದರೂ ವಶಪಡಿಸಿಕೊಳ್ಳಬಹುದೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಿಲ್ಲ. ಇಷ್ಟು ಎಕರೆ ಇಂಥ ಜಾಗದಲ್ಲಿ ಎಂದು ಪ್ಲಾ ಟ್ ಮಾಡಿ ಅದಕ್ಕನು ಗುಣವಾಗಿ ಮಂಜೂರಾಗಿದೆ. ಆದರೆ ಸರ್ಕಾರದ ಗಮನಕ್ಕೆ ಬಾರದಿರುವ ರೀತಿಯಲ್ಲಿ ಎಕ್ರೋಚ್ ಮಾಡಿದ್ದಾರೆ, ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬುದು ಈಗ ಗೊತ್ತಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಕೊಟ್ಟಿರುವವರಿಗೆ ಸ್ವಾಧೀನಕ್ಕೆ ಕೊಡುವುದಕ್ಕೆ ಮತ್ತು ಸಾಗುವಳಿ ಚೀಟಿ ಕೊಡುವುದಕ್ಕೆ ಸರ್ಕಾರಕ್ಕೇನಾದರೂ ತೊಂದರೆಯಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜೂರಾಗಿರುವ ಜಮೀನನ್ನು ಕೊಡಲು ಸರ್ಕಾರಕ್ಕೆ ಯಾವ ಅಭ್ಯಂತರವೂ ಇಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಕ್ರೋಚ್ ಮಾಡಿದ್ದಾರೆಂದು ಯಾವಾಗ ಗೊತ್ತಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅರ್ಜಿ ಬಂದಮೇಲೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅರ್ಜಿ ಸರ್ಕಾರಕ್ಕೆ ಯಾವಾಗ ಬಂತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಬರುತ್ತಲೇ ಇರುತ್ತದೆ; ನಿನ್ನೆ ದಿವಸ ಕೂಡ ಬಂತು.

ಶ್ರೀ ಎ. ವಿ. ನರಸಿಂಹರೆಡ್ಡಿ.—1952ನೆಯ ಇನವಿಯಲ್ಲಿ ಕೊಟ್ಟ ಜಮೀನನ್ನು ಇಲ್ಲಿಯವರೆಗೂ ಸ್ವಾಧೀನಕ್ಕೆ ಕೊಡದಿದ್ದರೆ ಅದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳಬೇಡವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಸರ್ವೆ ಇಲಾಖೆ ಫೋಡಿ ಕೆಲಸ ನಡೆಸುತ್ತಿದೆ, ಫಾರೆಸ್ಟ್ ಇಲಾಖೆ, ಮತ್ತು ರೆವೆನ್ಯೂ ಇಲಾಖೆಯವರು ಜೇರಿ ಕೆಲಸ ಮಾಡುತ್ತಿದ್ದಾರೆ. ಎಕ್ರೋಚ್ ಮಾಡಿರುವುದನ್ನು ನೋಡಿ ಅದನ್ನು ವಶಪಡಿಸಿಕೊಂಡು ಸರ್ಕಾರದ ಆಜ್ಞೆಪ್ರಕಾರ ಕೊಟ್ಟಿರುವವರಿಗೆ ಕೊಡುತ್ತೇವೆ

ಶ್ರೀ ಎ. ವಿ. ನರಸಿಂಹರೆಡ್ಡಿ.—ಜಮೀನನ್ನು ಮುಂಜೂರುಮಾಡಿದ ಮೇಲೆ ಅದನ್ನು ಅಳತೆಮಾಡಿ ಸ್ವಾಧೀನಕ್ಕೆ ಕೊಡುವುದು ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಕ್ಕಾ ಪೋಡಿ ಮಾಡಿಕೊಡಬೇಕು. ಆದರೆ ಈಗ ಜಮೀನಿಗೆ ಒತ್ತಡ ಹೆಚ್ಚಾಗಿರುವುದರಿಂದ ಕಚ್ಚಾ ಪೋಡಿ ಮಾಡಿಕೊಡುತ್ತೇವೆ. ಒಂದೊಂದುವೇಳೆ ಜನರು ಹದ್ದುಮೀರಿ ಇತರರ ಜಮೀನನ್ನು ಆಕ್ರಮಣಮಾಡಿಕೊಳ್ಳುತ್ತಾರೆ.

Grant of Lands for Cardamom cultivation.

Q.—667. Sri G. PUTTASWAMY (Chikmagalur — Mudigere — Scheduled Castes).—

Will the Government be pleased to state :—

(*a*) whether it has come to their notice that much hardship is being experienced by the application of Rule 43 of the Land Revenue Rules for grant of lands under cardamom cultivation imposing restrictions on a holding in Chikmagalur, Mudigere and Sakalespur taluks where cardamom cultivation is excessive ;

(*b*) whether they would consider the question of including cardamom cultivation under the Rule for the grant of lands for coffee cultivation (Appendix N of Land Revenue Rules, Part I) ?

A.—Sri H. M. CHANNABASAPPA (Minister for Revenue and Agriculture).—

(*a*) No such instances have come to the notice of Government.

(*b*) This will be examined.

ಶ್ರೀ ಜಿ. ಪುಟ್ಟಸ್ವಾಮಿ.—ಕಾಫಿ ಮತ್ತು ಏಲಕ್ಕಿ ಬೆಳೆಯುವ ಜಮೀನುಗಳು ಮಲೆನಾಡಿನಲ್ಲಿ ಕೆಲವು ಕಡೆ ಇವೆ, ಅವುಗಳಲ್ಲಿ ಬೇರೆ ಫಸಲನ್ನಿಡುವುದಕ್ಕಾಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರೆ ಮರಗಳು ಬೆಳೆಯಬಹುದು, ಬೇರೆ ಯಾವ ಫಸಲನ್ನಿಡಬಹುದೆಂಬುದು ಗೊತ್ತಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಏಲಕ್ಕಿ ಮತ್ತು ಕಾಫಿ ಬೆಳೆಯುವ ಜಮೀನುಗಳಲ್ಲಿ ಅವು ಮಾತ್ರ ಬೆಳೆಯುತ್ತವೆಯೇ ಏನಾ ಬೇರೆ ಫಸಲು ಬೆಳೆಯುವುದಿಲ್ಲವೆಂಬುದು ಅವಗಾಹನೆಗೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ಕಾಫಿ, ಏಲಕ್ಕಿಯನ್ನೇ ಬೆಳೆಯುತ್ತಾರೆಂದು ತಿಳಿದು ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಏಲಕ್ಕಿ ಬೆಳೆಯುವ ಜಮೀನಿನಲ್ಲಿ ಏಲಕ್ಕಿಯನ್ನೇ ಬೆಳೆಯಬೇಕಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಜಿ. ಪುಟ್ಟಸ್ವಾಮಿ.—ಏಲಕ್ಕಿ ಕಾಫಿ ಬೆಳೆಯ ಹಾಗೆ ಪ್ರತ್ಯೇಕತೆಯನ್ನು ಹೊಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಿದ್ದಮೇಲೆ ಕಾಫಿ ಬೆಳೆಗೆ ಯಾವ ಕಾನೂನಿದೆಯೋ ಅದೇ ಕಾನೂನನ್ನು ಏಲಕ್ಕಿ ಬೆಳೆಗೂ ಅನ್ವಯಿಸುವುದು ಸೂಕ್ತವಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ಕೈಗಾರಿಕಾ ಗ್ರೂಪುಗಳಿಗೂ ಒಂದೇ ರೂಲ್ಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಏಲಕ್ಕಿ ಬೆಳೆಯುವ, ಜಮೀನು ಮಲೆನಾಡಿನಲ್ಲಿ ಹೆಚ್ಚಾಗಿದ್ದು ಅದನ್ನು ವಿಲೇವಾರಿ ಮಾಡದಿದ್ದರೆ ಸರ್ಕಾರಕ್ಕೆ ನಷ್ಟವಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜರಾಬಾದ್ ಮೂಡಿಗೆರೆ ಈ ಎರಡು ತಾಲ್ಲೂಕುಗಳಲ್ಲಿರುತ್ತದೆ. ಅಲ್ಲಿಗೆ 43ನೆಯ ಸೆಕ್ಷನ್‌ನಿಂದ ತೊಂದರೆಯೆಂದು ವರದಿ ಬಂದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಂದ ಕಾಫಿ ಜಮೀನಿನ ಹಾಗೆ ಏಲಕ್ಕಿ ಜಮೀನನ್ನೂ ಸಹ ವಿಲೆ ಮಾಡಲು ಅಡ್ಡಿಯಿಲ್ಲ, ಕಾಫಿ ಜಮೀನು ವಿಲೇವಾರಿಮಾಡುವ ರೂಲ್ಸಿಗೆ ಅನುಗುಣವಾಗಿ ಏಲಕ್ಕಿ ಜಮೀನನ್ನೂ ವಿಲೇ ಮಾಡಬಹುದು ಎಂದು ವರದಿ ಬಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಬದಲಾಗಿ 43ನೆಯ ರೂಲ್ಸ್‌ಪ್ರಕಾರ ಏಲಕ್ಕಿಗೆ ಅನುಕೂಲವಾಗಿರುವ ಜಮೀನನ್ನು ಕೊಡುವುದಕ್ಕೆ ಅಡ್ಡಿ ಆತಂಕ ಬಂದಿಲ್ಲವೆಂದು ವರದಿಯಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗಾಗಲೇ ತಾಲ್ಲೂಕುಗಳಲ್ಲಿ ಏಲಕ್ಕಿಗೆ ಸಂಬಂಧಪಟ್ಟ ಜಮೀನಿನ ವಿಲೇ ಸಂಬಂಧದಲ್ಲಿ ಬಹಳ ನಿಧಾನವಾಗಿದೆ ಎಂದು ಅರ್ಜಿಗಳು ಬಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಬಂದಿರುವ ವರದಿಯಂತೆ ಹತ್ತು ಎಕರೆಗೆ ಒಳಪಟ್ಟ ಜಮೀನನ್ನು ಕೊಡಬೇಕೆಂದು ಇರುವ ರೂಲ್ಸ್‌ಪ್ರಕಾರ ಜಮೀನು ಕೊಡಲಾಗುತ್ತಾ ಇದೆ. ಅದರ ಪ್ರಕಾರ ಪಡೆದು ವ್ಯವಸಾಯ ಮಾಡುತ್ತಿದ್ದಾರೆ, ಅವರಿಗೆ ಯಾವ ತೊಂದರೆಯೂ ಆಗಿಲ್ಲ ಎಂದು ತಿಳಿದುಬಂದಿದೆ.

12-30 P.M.

ಶ್ರೀ ಜಿ. ಪುಟ್ಟಸ್ವಾಮಿ.—ಅಂಥ ಅಡ್ಡಿಗಳೇನಾದರೂ ಇದ್ದರೆ ಅವುಗಳನ್ನು ಜಾಸ್ತಿ ಪೈನಲ್ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥ ನಿಂದರ್ಭಗಳಿದ್ದು-ಅವುಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅವುಗಳನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ತಾವು ಹೇಳಿರುವ ಪ್ರಕಾರ 10 ಎಕರೆಗಳಿಗಿಂತ ಕಡಮೆ ಪ್ರದೇಶದಲ್ಲಿ ಏಲಕ್ಕಿ ಬೆಳೆಯತಕ್ಕವರು ಎಷ್ಟು ಭೂಮಿ ಕೇಳಿದರೂ ತಾವು ಕೊಡುತ್ತೀರಾ !

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಕೊಡುತ್ತೇನೆಂದು ಹೇಳಲಿಲ್ಲ. ಪರಿಶೀಲನೆ ಮಾಡುವುದಾಗಿ ತಿಳಿಸಿದ್ದೇನೆ.